ನಿರ್ಲಿಪ್ತನಾಗಿ ಉಳಿದುಬಿಡುವುದೆಂದರೆ ಹೇಗೆ? ಎದೆಯಲ್ಲಿ ಏನೋ ಸಿಕ್ಕಿಹಾಕಿಕೊಂಡಂತಾಗಿ, ಗಂಟಲ ನರಗಳು ಉಬ್ಬಿ, ಉಸಿರಾಡಲು ಕಷ್ಟವೆನ್ನಿಸಿದಾಗ ಒಳ ನಡೆದು ನೀರು ಕುಡಿದು ಬಂದ. ಮೊದಲು ಈ ವ್ಯಾಮೋಹದಿಂದ ಬಿಡಿಸಿಕೊಳ್ಳಬೇಕು ಎನ್ನಿಸಿತು. ತಕ್ಷಣ ಬಹಳ ಮುಖ್ಯವಾದ ಮುಂದಿನ ಪಾಯಿಂಟ್ ಹೊಳೆದಂತೆನ್ನಿಸಿ, ಕುರ್ಚಿಗೆ ಧಾವಿಸಿ, ಗಡಿಬಿಡಿಯಲ್ಲಿ ಅದನ್ನು ದಾಖಲಿಸಿದ:

ಪಾಯಿಂಟ್ ನಂಬರ್ ಫೋರ್, ದಿ.10.1.2016 ಭಾನುವಾರ, ಮಧ್ಯಾಹ್ನ, 1.20

ಮನೆಯನ್ನು ಸಾಲ ಸಮೇತ ಯಾವುದಾದರೂ ಒಳ್ಳೆ ಸೈಟ್‌ನಲ್ಲಿ ಮಾರಾಟಕ್ಕೆ ಹಾಕಿಬಿಡಬೇಕು.

ತನ್ನ ಯೋಚನಾಕ್ರಮ ಒಂದು ಹಂತಕ್ಕೆ ಬಂದಂತೆನ್ನಿಸಿ ಸಮಾಧಾನದಿಂದ ಲ್ಯಾಪ್‌ಟಾಪ್ ಮುಚ್ಚಿದ. ಆದರೆ ಮನಸ್ಸು ಸ್ವಲ್ಪ ತಿಳಿಯಾಗಿದ್ದೇ ಹೊಸ ಆಲೋಚನೆಯೊಂದು ಹುಟ್ಟಿಕೊಂಡಿತು. ಯಾವ ಕಾರಣಕ್ಕಾಗಿ ತನ್ನ ಜರ್ಮನಿ ಪ್ರವಾಸ ರದ್ದುಗೊಳಿಸಬೇಕೆಂದು ಅವನಿಗೆ ಹೊಳೆಯಲಿಲ್ಲ, ಅದೂ ಇಷ್ಟೊಂದು ತಯಾರಿ ಮಾಡಿಕೊಂಡಿರುವಾಗ? ಆಫೀಸಿನ ಕೆಲಸದ ನಡುವೆ ಇಪ್ಪತ್ತು ಸಾವಿರ ತೆತ್ತು ತನ್ನ ತಲೆಗೆ ಸುಲಭದಲ್ಲಿ ಹತ್ತದ ಜರ್ಮನ್ ಭಾಷೆ ಕಲಿಯಲು ಮೂರು ತಿಂಗಳಿಂದ ಮ್ಯಾಕ್ಸ್ ಮುಲ್ಲರ್ ಭವನದಲ್ಲಿ ಇನ್ನಿಲ್ಲದಷ್ಟು ಸೆಣಸಾಡಿ, ಏನೆಲ್ಲಾ ಕಷ್ಟಪಟ್ಟಿರುವಾಗ ಇನ್ನು ಮೂರು ದಿನಗಳಲ್ಲಿ ಸಾಯುವುದಕ್ಕೆ ಇಷ್ಟೆಲ್ಲಾ ಯೋಚಿಸಬೇಕೆ? ಕೆಲವೇ ದಿನಗಳಲ್ಲಿ ಜರ್ಮನಿಗೆ ಹೋಗಲು ಎಲ್ಲಾ ತಯಾರಿ ನಡೆದಿರುವಾಗ ಕಟ್ಟ ಕಡೆಯ ಒಂದೆರಡು ದಿನಗಳಾದರೂ ಜರ್ಮನಿಯಲ್ಲಿ ಕಳೆದು ಅಲ್ಲೇ ಸಾಯುವ ಹಾಗಿದ್ದರೆ? ಪ್ರಾಯಶಃ ಆಫೀಸಿನಲ್ಲಿ ಈ ವಿಷಯ ತಿಳಿಸದೇ ಇದ್ದಿದ್ದೇ ಒಳ್ಳೆಯದಾಯಿತು. ಹೇಗೆಂದರೂ ಹೊರಗಿನಿಂದ ನೋಡಲು ಯಾವ ಕಾಯಿಲೆಯೂ ಇರುವಂತೆ ಕಾಣದೆ ಈಗಲೂ ಗಟ್ಟಿಮುಟ್ಟಾಗಿದ್ದೇನೆ. ಇನ್ನು ಮೂರು ದಿನಗಳಲ್ಲಿ ಡಾಕ್ಟರ್ ಭವಿಷ್ಯವಾಣಿಯಂತೆ ತಾನು ಸಾಯದಿದ್ದರೆ, ವಾರಾಂತ್ಯದಲ್ಲಿ ನಿಗದಿ ಪಡಿಸಿದಂತೆ ಜರ್ಮನಿಗೆ ಹೊರಟು ಬಿಟ್ಟರೆ ಹೇಗೆ? ಆದರೆ ಜರ್ಮನಿಯಲ್ಲೇನಾದರೂ ಸತ್ತರೆ? ಅಪ್ಪ ಅಮ್ಮರಿಗೆ ದೇಹವನ್ನು ಭಾರತಕ್ಕೆ ತರಿಸಿಕೊಳ್ಳಲು ತಿಳಿಯದೆ, ಕಂಪೆನಿಯೂ ಕೈ ಬಿಟ್ಟರೆ?

ಅರೆ, ಪ್ರಾಯಶಃ ಎಲ್ಲಕ್ಕಿಂತ ಮೊದಲು ತಾನು ಮಾಡಬೇಕಾದ ಕಾರ್ಯ ಇದೇ. ನಾಳೆ ಆಫೀಸಿಗೆ ಹೋಗಿದ್ದೇ ಒಂದು ವೇಳೆ ಜರ್ಮನಿಯಲ್ಲಿ ಸತ್ತರೆ, ಯಾವ ರೀತಿಯ ಪ್ರೊಸೀಜರ್ ಇದೆ ಅನ್ನುವುದನ್ನು ಉಪಾಯದಿಂದ ತಿಳಿದುಕೊಳ್ಳಬೇಕು. ದೇಹ ತರಿಸಿಕೊಳ್ಳಲು ಕಂಪೆನಿಯಲ್ಲಿ ತಕರಾರಿಲ್ಲದಿದ್ದರೂ, ನಾಳೆಯೇ ಒಬ್ಬ ಲಾಯರನ್ನು ಹಿಡಿದು ಸಿಕ್ರೇಟ್ ವಿಲ್ ಬರೆಸಿ, ಸಂದಾಯವಾಗಬೇಕಿದ್ದ ಹಣವೆಲ್ಲಾ ಸತ್ತ ನಂತರ ಯಾರ್ಯಾರಿಗೆ ಸಲ್ಲಬೇಕೋ ಆ ವ್ಯವಸ್ಥೆ ಮಾಡಿಡಬೇಕು. ಡೆಡ್ ಬಾಡಿಯನ್ನು ತರಿಸಲು ಎಷ್ಟು ಖರ್ಚಾಗುತ್ತೆ, ದೇಹ ಕೊಳೆಯದೇ ಇರಲು ಯಾವ ರೀತಿಯ ಶವ ಪೆಟ್ಟಿಗೆ ಬೇಕಾಗುತ್ತೆ, ಅದು ಜರ್ಮನಿಯಲ್ಲಿ ಎಲ್ಲಿ ಸಿಗುತ್ತೆ, ಅಂತಹ ಕಾರ್ಯ ನಡೆಸುವ ಸಿಕ್ರೇಟ್ ಏಜೆಂಟ್ ಯಾರು, ಮೊದಲೇ ತಿಳಿದಿದ್ದರೆ ಒಳ್ಳೆಯದು. ಇವನ್ನೆಲ್ಲಾ ಅದ್ಯಾವ ವೆಬ್ ಸೈಟ್‌ನಲ್ಲಿ ಹುಡುಕುವುದಪ್ಪಾ...

ಸದಾನಂದ ಹೊಸ ಚಿಂತೆ ಹತ್ತಿದವನಂತೆ ಮತ್ತೆ ಒಳ ಬಂದು ನೆಟ್ ತೆರೆದ.

★★★

ಎರಡು ದಿನ ಸಂಪೂರ್ಣ ಊಟ, ನಿದ್ದೆ ಬಿಟ್ಟು ಹಗಲು ರಾತ್ರಿ ನೆಟ್‌ನಲೆಲ್ಲಾ ಜಾಲಾಡಿದರೂ ಸದಾನಂದನಿಗೆ ಸಮರ್ಪಕ ಉತ್ತರ ಸಿಗದೆ ಕಂಗಾಲಾದ. ಸತ್ತಿದ್ದು ಖಚಿತವಾಗಿ ರಿಜಿಸ್ಟರ್‌ಗೊಂಡು,